ಎಸ್.ಎ. ಮೋಹನರಾಜು, ಶಿವಮೊಗ್ಗ

*ಸ್ವಚ್ಛತಾ ಆಂದೋಲನ ಕಾರ್ಯಕ್ರಮವು ಯಾರಿಗೆ ಪಥ್ಯವಾಗುವುದಿಲ್ಲ?*



ಎಮ್ಮೆಗಳಿಗೆ, ಹಂದಿಗಳಿಗೆ, ನೊಣಗಳಿಗೆ,.....

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ಎಲ್ಲರಿಗೂ ನಗೆಯ ಅಮೃತವನ್ನು ಉಣಬಡಿಸುವ ನಿಮ್ಮೊಳಗೂ ನೋವಿನ ಹಾಲಾಹಲವಿದೆಯಾ ಸಾರ್?*

ಒಂದು ಸಣ್ಣ ತಿದ್ದುಪಡಿ ನೋವು ವಿಷವಲ್ಲ, ವ್ಯಕ್ತಿತ್ವ ವರ್ಧಕ ಟಾನಿಕ್.

ಹಾಡ್ಯ ಬ. ಜಯಾನಂದ, ಮೈಸೂರು

*ಲಂಕೇಶನ ಹತ್ತು ತಲೆಗಳ ಪೈಕಿ ಒಂದರಲ್ಲೂ ಮೆದುಳು ಇರಲಿಲ್ಲವೆ?*

ಹತ್ತರಲ್ಲೂ ಇದ್ದುದರಿಂದಲೇ ಸರ್ವವೇದಪಾರಂಗತ; ಆ ಹೊತ್ತಿಗೆ ಮೋಹ ವೈರಸ್ ದಾಳಿಯಿಂದ ಸಿಸ್ಟಮ್ ಕೆಟ್ಟಿತ್ತಷ್ಟೆ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಸಕಲ ವೈಭೋಗಗಳಿಂದ ಬೀಗುತ್ತಿರುವ ಕೆಲವು ಮಠಾಧೀಶರ ಮುಂದೆ ದೇವರೇ ಬಡವನಂತೆ ಕಾಣುವನಲ್ಲಾ, ಏಕೆ?*

ಆ ಮಠಾಧೀಶರು ಭಕ್ತರನ್ನು ಸೆಳೆಯಲು ಮಠ ಬಳಸುವ ಜಾಹೀರಾತು. ದೇವನಿಗೆ ಜಾಹೀರಾತಿನ ಅಗತ್ಯವಿಲ್ಲವಲ್ಲ.

ರವೀಂದ್ರನಾಥ ಯಡಹಳ್ಳಿ, ಬೀಳಗಿ

*ರಕ್ತಸಂಚಾರಕ್ಕೂ, ವಾಹನಸಂಚಾರಕ್ಕೂ ಇರುವ ವ್ಯತ್ಯಾಸವೇನು?*



ಗಣೇಶ್

ರಕ್ತ ನಿಗದಿತ ಮಾರ್ಗದಲ್ಲೇ ಸಂಚರಿಸುತ್ತದೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಹಿರಿಯರನೇಕರಿದ್ದರೂ ದ್ರೌಪದಿಯ ಮಾನ ರಕ್ಷಣೆಗೆ ಕೃಷ್ಣನೇ ಬರಬೇಕಾಯಿತಲ್ಲಾ ರಾಂ...?*

ಅಷ್ಟೊಂದು ಸೀರೆಗಳ ಸ್ಟಾಕ್ ಅವನೊಬ್ಬನ ಬಳಿಯೇ ಇದ್ದದ್ದು.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಮನಸ್ಸೇ ಒಂದು ಕಸದ ತೊಟ್ಟಿಯಾದರೆ ಮನುಷ್ಯ...?*

ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯುವ ಕಾರ್ಪೊರೇಶನ್ ಲಾರಿ.

ಮಲ್ಲನಗೌಡ ಪಾಟೀಲ, ರಾಮದುರ್ಗ

*ಕರ್ಣನಿಗೂ, ಕುಂಭಕರ್ಣನಿಗೂ ಏನು ವ್ಯತ್ಯಾಸ?*

ಕುಂಭಕರ್ಣ ಆಕಾರದಿಂದ ಶ್ರೇಷ್ಠ; ಕರ್ಣ ಆಚಾರದಿಂದ ಶ್ರೇಷ್ಠ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಭೂಮಿಗೆ ಹೆಣ್ಣಿನ ಹೆಸರೇಕೆ ಕೊಟ್ಟಿದ್ದಾರೆ?*

'ಸದಾ ತುಳಿತಕ್ಕೆ ಒಳಗಾಗುವುದರಿಂದ' ಎಂದಿತೊಂದು ಸ್ತ್ರೀಪಡೆ.

ಕೆ.ಎನ್. ಗೋಪಾಲಕೃಷ್ಣ, ಕಗ್ಗದಾಸಪುರ

*ಅಡಿಗೆ ಮನೆಯಲ್ಲಿ ನೀರಲ್ಲದೆ ಯಾವುದು ಹೆಚ್ಚಾಗಿ ಖರ್ಚಾಗುತ್ತದೆ, ಯಾವುದು ಕಡಿಮೆ ಖರ್ಚಾಗುತ್ತದೆ?*

ಸಮಯ, ಕೆಡಿಸಿದ ಅಡಿಗೆ.

ಟಿ.ಎಸ್. ನಂದಿತ, ಹೊಸಪೇಟೆ

*ಒಬ್ಬ ತಾಯಿ ಹತ್ತು ಮಕ್ಕಳನ್ನು ಹೆತ್ತು ಸಾಕುತ್ತಾಳೆ. ಆದರೆ ಹತ್ತು ಮಕ್ಕಳು ಒಬ್ಬ ತಾಯಿಯನ್ನು ಸಾಕಲು ಯೋಚಿಸುವರಲ್ಲಾ...?*

ತಾಯಿ ಮಕ್ಕಳನ್ನು ಸಾಕಲು ಯಾರ ಅನುಮತಿಯನ್ನೂ ಪಡೆಯಬೇಕಾಗಿಲ್ಲವಲ್ಲ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಇಲ್ಲೊಬ್ಬಳು ಮೌನವಾಗಿ ಕಾವ್ಯ ರಚನೆಯಲ್ಲಿ ತೊಡಗಿದ್ದಾಳಲ್ಲಾ...?*

ಓಡಿ! ಜಗತ್ತಿನಲ್ಲಿ ಫ್ರೆಷ್ ಕವಿಗಿಂತ ಕೊರೆಯುವ ಯಂತ್ರ ಇನ್ನಾವುದೂ ಇಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು

*ತನ್ನ ಗಂಡ ಶ್ರೀರಾಮನಂತಿರಬೇಕು ಅಂತ ಬಯಸುವ ಹೆಂಗಸರು ಈಗಲೂ ಇದ್ದಾರೆಯೆ?*

ಇದ್ದಾರಲ್ಲಾ! ರಾಮನಂತೆಯೇ ಅಪ್ಪ ಅಮ್ಮನಿಂದ ದೂರವಾಗಿ ದೂರದಲ್ಲಿ ಮನೆ ಮಾಡಬೇಕೆನ್ನುವವರು!

ಕೆ.ಯಂ. ವೀರೇಶ್, ಕೂಡ್ಲಿಗಿ

*ಜಾತಿ, ಮತ, ಪಂಥಗಳನ್ನು ಓಲೈಸುವ ನಾಯಕರನ್ನು ಏನೆಂಬೆ ರಾಮ್?*

ಕ್ಷಮೆ ಇರಲಿ. ಸಭ್ಯತೆಯ ಚೌಕಟ್ಟು ಇರುವುದರಿಂದ ಇಲ್ಲಿ ಅವೆಲ್ಲವನ್ನೂ ಹೇಳಲಾರೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

*ನಿದ್ರೆ ಬಂದಂತೆ ವಿದ್ಯೆ ಏಕೆ ಬರುವುದಿಲ್ಲ?*

ಕ್ರಮವೇ ಬೇರೆಯದಲ್ಲ; ವಿದ್ಯೆಗೆ ತಲೆ ತುಂಬಿಕೊಳ್ಳಬೇಕು; ನಿದ್ರೆಗೆ ತಲೆ ಖಾಲಿ ಮಾಡಿಕೊಳ್ಳಬೇಕು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸ್ವರ್ಗಕ್ಕೂ, ನರಕಕ್ಕೂ ಇರುವ ವ್ಯತ್ಯಾಸವೇನು?*

ಕಡಿಮೆ ಆಸೆ, ಹೆಚ್ಚು ಸೌಲಭ್ಯ ಸ್ವರ್ಗ; ಹೆಚ್ಚು ಆಸೆ, ಕಡಿಮೆ ಸೌಲಭ್ಯ ನರಕ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಎಲ್ಲರೂ ಸತ್ಯವನ್ನೇ ಮಾತನಾಡಿದರೆ ಹೇಗಿರುತ್ತದೆ ಸಾರ್?*

ಸಾವಿರಾರು ವಕೀಲರು ಕೇಸೇ ಇಲ್ಲದೆ ನಿರುದ್ಯೋಗಿಗಳಾಗುತ್ತಾರೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಆಪರೇಷನ್ ಮಾಡುವಾಗ ವೈದ್ಯರು ತಮ್ಮ ಮುಖವನ್ನೇಕೆ ಮುಚ್ಚಿಕೊಂಡಿರುತ್ತಾರೆ?*



ಕೇಸ್ ಕ್ಲೋಸ್ ಆಗುವವರೆಗೆ ಆರೋಪಿಯ ಮುಖ ತೋರಿಸದಿರುವುದು ಶಿಷ್ಟಾಚಾರ.

ಹೇಮಂತ ಜಿ. ಬಾಚ್ಯಾಳ್, ಬನಹಟ್ಟಿ

*ಫೆಬ್ರವರಿ 29ರಂದು ಹುಟ್ಟಿದವರು 40 ವರ್ಷವಾಗಿದ್ದರೂ ಎಷ್ಟು ಸಾರಿ ಹುಟ್ಟಿದ ದಿನವನ್ನು ಆಚರಿಸಿಕೊಳ್ಳುತ್ತಾರೆ?*

ಕ್ಯಾಲೆಂಡರ್ ಲೆಕ್ಕದವರಾದರೆ 11, ನಟಿಯಾದರೆ 70 (18ರವರೆಗೆ 4; ನಟಿಯಾದ ನಂತರ ವರ್ಷಕ್ಕೆ 3).

ಲಕ್ಷ್ಮೀ ವೆಂಕಟೇಶ್, ಹೊಸಕೋಟೆ

*ಪ್ರಶ್ನೆಯೇ ಇಲ್ಲದ ಉತ್ತರ ಯಾವುದು?*

ಉತ್ತರ ದಿಕ್ಕು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮದುವೆಯ ಗಂಡಿಗೆ ಪೇಟ ಏಕೆ?*

ಮುಂದೆ ತಲೆ ಮೊಟಕಿಸಿಕೊಂಡಾಗ ಎಲ್ಲರಿಗೂ ಕಾಣದಂತೆ ಮುಚ್ಚಿಕೊಳ್ಳಲು.

■ ರಾಮ್